

# LINGAYATA DARSHANA
# ಲಿಂಗಾಯತ ದರ್ಶನ

ISSN : 2456-6837

ಬಿಡಿ ಪ್ರತಿ ರೂ. ೨೦

ಸಂಪುಟ – ೦೮ ಆಗಸ್ಟ್ ೨೦೨೧ ಸಂಚಿಕೆ–೦೮

Volume-8 Edition-8



ಕರ್ನಾಟಕದ ನೂತನ ಮುಖ್ಯಮಂತ್ರಿಗಳಾಗಿ ಆಯ್ಕೆಯಾದ

**ಸನ್ಮಾನ್ಯ ಶ್ರೀ ಬಸವರಾಜ ಬೊಮ್ಮಾಯಿ**

ಅವರಿಗೆ

ಹೃದಯ ಪೂರ್ವಕ ಅಭಿನಂದನೆಗಳು

Vachana Adhyayana Kendra

[redacted]

**ವಚನ ಅಧ್ಯಯನ ಕೇಂದ್ರ**

ನಾಗನೂರು ರುದ್ರಾಕ್ಷಿಮಠ, ಶಿವಬಸವ ನಗರ, ಬೆಳಗಾವಿ



॥ ಶ್ರೀ ಗುರು ಬಸವಲಿಂಗಾಯ ನಮಃ ॥

# ಲಿಂಗಾಯತ ದರ್ಶನ

LINGAYATA DARSHANA

ಮಾಸಿಕ


ಸಂಪುಟ : ೮ ಅಗಸ್ಟ್ ೨೦೨೧ ಸಂಚಿಕೆ : ೮



ಮಾರ್ಗದರ್ಶನ

**ಪೂಜ್ಯಶ್ರೀ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು**

ರುದ್ರಾಕ್ಷಿಮಠ, ನಾಗನೂರು-ಬೆಳಗಾವಿ

ತೋಂಟದಾರ್ಯ ಸಂಸ್ಥಾನಮಠ, ಗದಗ-ಡಂಬಳ

ಸಂಪಾದಕ

**ಡಾ॥ ಎನ್. ಜಿ. ಮಹಾದೇವಪ್ಪ**

ಸಹ ಸಂಪಾದಕ

**ಡಾ॥ ರಾಮಕೃಷ್ಣ ಮರಾಠೆ**

**ಸಂಪಾದಕ ಮಂಡಳಿ**

ಡಾ॥ ಗುರುಲಿಂಗ ಕಾಪಸೆ
ಡಾ॥ ಸಿ. ಕೆ. ನಾವಲಗಿ
ಶ್ರೀ ಆರ್. ಪಿ. ಅಪರಾಜ
ಡಾ॥ ವಿ. ಎಸ್. ಮಾಳಿ
ಡಾ॥ ಬಸವರಾಜ ಜಗಜಂಪಿ
ಶ್ರೀ ಬಿ. ಬಿ. ಹೊಸಮನಿ
ಡಾ. ಎಂ. ಎಸ್. ಹುಲ್ಲೋಳಿ
ಶ್ರೀಮತಿ ನೀಲಗಂಗಾ ಚರಂತಿಮಠ



**ಪ್ರಕಾಶಕರು**

ಕಾರ್ಯದರ್ಶಿ ಶ್ರೀ ಸಿದ್ಧರಾಮೇಶ್ವರ ಶಿಕ್ಷಣ ಸಂಸ್ಥೆಯ

**ವಚನ ಅಧ್ಯಯನ ಕೇಂದ್ರ**

ನಾಗನೂರು ಶ್ರೀ ರುದ್ರಾಕ್ಷಿಮಠ, ಶಿವಬಸವನಗರ

ಬೆಳಗಾವಿ-೫೯೦೦೧೦

ಮೊ:೯೮೮೬೭೫೬೫೨೨ *email:basavaguru@rediffmail.com*

*Web: www.rudrakshimath.in*


**ಚಂದಾವಿವರ**

| | | |
|---|---|---|
| ಮಹಾಪೋಷಕರು | ರೂ. | ೧೦,೦೦೦=೦೦ |
| ಪೋಷಕರು | ರೂ. | ೫೦೦೦=೦೦ |
| ಆಜೀವ | ರೂ. | ೩೦೦೦=೦೦(೨೦ ವರ್ಷ) |
| ಆರುವರ್ಷದ | ರೂ. | ೧೦೦೦=೦೦ |
| ಒಂದುವರ್ಷದ | ರೂ. | ೨೦೦=೦೦ |
| ಬಿಡಿ ಪ್ರತಿ | ರೂ. | ೨೦=೦೦ |

ಚಂದಾಹಣವನ್ನು ನಗದು ಅಥವಾ 'ವಚನ ಅಧ್ಯಯನ ಕೇಂದ್ರ' ಹೆಸರಿನಲ್ಲಿ ಕ್ರಾಸ್ ಮಾಡಿದ ಡಿ.ಡಿ/ಚೆಕ್‌ಮುಖಾಂತರ "ನಿರ್ದೇಶಕರು, ವಚನ ಅಧ್ಯಯನ ಕೇಂದ್ರ ನಾಗನೂರು ರುದ್ರಾಕ್ಷಿಮಠ, ಶಿವಬಸವ ನಗರ, ಬೆಳಗಾವಿ-೫೯೦ ೦೧೦" A/C 520101070638493 IFSC-UBIN0920908 ಈ ವಿಳಾಸಕ್ಕೆ ಕಳಿಸಬೇಕಾಗಿ ವಿನಂತಿ.

## ಅಂತರಂಗದೊಳಗೆ.....


* ಸಂಪಾದಕೀಯ ೨

* ವಚನಾರ್ಥ-ಚಿಂತನ ೪
  - **ಡಾ. ಸಿದ್ಧರಾಮ ಸ್ವಾಮಿಗಳು**

* ಜಗದ ವ್ಯಸನಗಳೆಲ್ಲ ಮಹಾಂತ ಜೋಳಿಗೆಯೊಳಗೆ ಐಕ್ಯವಾಗುತ್ತಲೇ ಇರಲಿ ೬
  - **ವೆಂಕಟೇಶ ಕೆ. ಜನಾದ್ರಿ**

* ಕಾಯಕದ ಕೈಗನ್ನಡಿ ನುಲಿಯ ಚಂದಯ್ಯ ೯
  - **ಸಿದ್ಧಯ್ಯ ಪುರಾಣಿಕ**

* ಶರಣರ ವಿಶ್ವಭ್ರಾತೃತ್ವ ೧೨
  - **ಡಾ. ರಾಜಶೇಖರ ಡೊಂಬರಮತ್ತೂರ**

* ಇಷ್ಟಲಿಂಗ ೧೫
  - **ಪ್ರೊ. ಜಿ. ಬಿ. ಹಳ್ಯಾಳ**

* ಶಿವಶರಣರ ವಚನಗಳಲ್ಲಿ ದೇಹದ ಪರಿಕಲ್ಪನೆ ೧೮
  - **ಡಾ. ಎಂ. ಎಸ್. ಮಾಗಣಗೇರಿ**

* ವಚನ ಸಾಹಿತ್ಯ ಮತ್ತು ದಾಂಪತ್ಯ ಜೀವನ ೨೨
  - **ಡಾ. ಪ್ರಕಾಶ ಎನ್. ನರಗುಂದ**

* ಕಂಥೆಯ ಲಿಂಗದ ಕರ್ತೃ ಯಾರು? ೨೬
  - **ಪ್ರೊ. ಆರ್. ಎಂ. ಕರಡಿಗುದ್ದಿ**

* ಅನುಭಾವ ಪರಿಕಲ್ಪನೆ ೩೦
  - **ಸಿದ್ಧರಾಜ ಪೂಜಾರಿ**



ಇಲ್ಲಿಯ ಲೇಖನಗಳ ಅಭಿಪ್ರಾಯಗಳು ಲೇಖಕರವೇ ಹೊರತು ಪತ್ರಿಕೆಯ ಅಭಿಪ್ರಾಯಗಳಲ್ಲ. -ಸಂ

Vachana Sahitya mattu Dampatya Jeevan

# ವಚನ ಸಾಹಿತ್ಯ ಮತ್ತು ದಾಂಪತ್ಯ ಜೀವನ

● ಡಾ. ಪ್ರಕಾಶ ಎನ್. ನರಗುಂದ
Dr Prakash N Naragund

'ವಚನ ಸಾಹಿತ್ಯ' ಶರಣರ ಸಾಹಿತ್ಯವಾಗಿದೆ. ಹನ್ನೊಂದು ಹನ್ನೆರಡನೆಯ ಶತಮಾನದ ಶರಣರು ಸೃಷ್ಟಿಸಿದ ಸಾಹಿತ್ಯವು ಕರ್ನಾಟಕ ಚರಿತ್ರೆಯಲ್ಲಿ ಚಿರಸ್ಮರಣೀಯವಾಗಿದೆ. ವಚನಗಳಿಗೂ, ಸಾಹಿತ್ಯಕ್ಕೂ ಸಂಬಂಧ ಕಾಣಿಸಿಕೊಂಡದ್ದು ಆರ್. ನರಸಿಂಹಾಚಾರ್ಯರು ಪ್ರಕಟಿಸಿದ 'ಕವಿಚರಿತೆ' ಯ ಮೊದಲ ಸಂಪುಟದಲ್ಲಿ ವಚನಕಾರರನ್ನು ಸೇರಿಸಿ ಅವರ ಒಂದೆರಡು ವಚನಗಳನ್ನು ಮಾದರಿಗಾಗಿ ಉದಾಹರಿಸಿದಾಗ ಆದರೆ ಇಲ್ಲಿ ವಚನಗಳಿಗೂ, ಸಾಹಿತ್ಯಕ್ಕೂ ಏರ್ಪಡುವ ಸಂಬಂಧ ಸ್ಪಷ್ಟವಾದದ್ದೇನೂ ಅಲ್ಲ ಕವಿಚರಿತೆಯಲ್ಲಿ ಅನೇಕ ಸಾಹಿತ್ಯೇತರ ಕೃತಿಗಳು ಸ್ಥಾನ ಪಡೆದಿವೆ. ಅವಕ್ಕೂ ವಚನಗಳಿಗೂ ಇರುವ ವ್ಯತ್ಯಾಸ ಇಲ್ಲಿ ಗೊತ್ತಾಗುವದಿಲ್ಲ. ವಚನ ಸಾಹಿತ್ಯ ಜನರ ಜೀವನಾಡಿಯಾಗಿದೆ. ಶರಣರು ಕಟ್ಟಬಯಸಿದ ಸಮಾಜದಲ್ಲಿ ಲಿಂಗ ಭೇದ, ಜಾತಿ ಭೇದ, ವರ್ಗ ಭೇದ ಕಾಯಕ ಭೇದ ಕಾಣುವದಿಲ್ಲ ಈ ಭೂಮಿಯ ಮೇಲೆ ಇರುವ ಜಲಚರ ಪ್ರಾಣಿ, ಪಕ್ಷಿ, ಮಾನವರನ್ನು ಸಮಾನತೆಯಿಂದ ಕಂಡವರು. ಶಿವ-ಶರಣರು ರಚಿಸಿದ ವಚನಗಳು ಕನ್ನಡ ಸಾಹಿತ್ಯದ ಉಪನಿಷತ್ತುಗಳಾಗಿವೆ.

ಶಿವಶರಣರು ರಚಿಸಿದ ವಚನಗಳು ಶಾಸ್ತ್ರವೇ ಹೊರತು ಸಾಹಿತ್ಯವಲ್ಲವೆಂದು ಕೆಲವರು ಹೇಳಿದ್ದಾರೆ. ವಚನ ಸಾಹಿತ್ಯದ ಸೊಬಗು, ಸೌಂದರ್ಯ, ಅನುಭವ, ಅನುಕಂಪ ಮುಂತಾದವುಗಳನ್ನು ಒಳಗೊಂಡಿವೆ. ವಚನಗಳು ಪದ್ಯಗಳಲ್ಲ, ಗದ್ಯ ರೂಪವಾದವುಗಳು; ಆಡುಮಾತಿನ ನೀರಸ ನಿರೂಪಣೆಯು ಅಲ್ಲ, ಪದ್ಯ ಶೈಲಿಯ ಭಾವಸೌಂದರ್ಯ ಗದ್ಯದ ವಿಚಾರ ಪ್ರತಿಪಾದನೆ ಎರಡನ್ನು ಒಳಗೊಂಡ ಒಂದು ರೀತಿಯ ವಿಶಿಷ್ಟ ಗದ್ಯ, ಗೀತೆಗಳೆಂದು ವಚನಗಳನ್ನು ಕರೆಯಬಹುದಾಗಿದೆ.

ವಚನ ಸಾಹಿತ್ಯದಲ್ಲಿ ಶಿವಶರಣರ ಬದುಕು, ದಾಂಪತ್ಯ ಜೀವನ, ಕಾಯಕ-ದಾಸೋಹವು ಸತ್ಯ ಶುದ್ದತೆಯಿಂದ ಕೂಡಿತ್ತು. ಶಿವಶರಣ ದಂಪತಿಗಳ ಆದರ್ಶ ಬದುಕು, ಅವರು ನಡೆದು ಬಂದ ದಾರಿಯನ್ನು ವಚನ ಸಾಹಿತ್ಯದಲ್ಲಿ ಅರಿಯಬಹುದು ಅಂಥಹ ವಚನಕಾರರಲ್ಲಿ ಆದ್ಯವಚನಕಾರ ದಂಪತಿಗಳ ಕಾಯಕ, ಭಕ್ತಿ, ಶ್ರದ್ಧೆ ಗಮನಾರ್ಹವಾದದು.

**ಜೇಡರ ದಾಸಿಮಯ್ಯ ದುಗ್ಗಳೆ :**

ಜೇಡರ ದಾಸಿಮಯ್ಯ ಹಾಗೂ ದುಗ್ಗಳೆಯರ ಜೀವನ ವೃತ್ತಾಂತ ಮಾರ್ಮಿಕವಾದುದು ಜೇಡರ ದಾಸಿಮಯ್ಯನವರು ಕಲಬುರಗಿ ಜಿಲ್ಲೆಯ ಸುರಪುರ ತಾಲೂಕಿನ ಮುದನೂರಿನ ಶಂಕರೀ ರಾಮಯ್ಯರೆಂಬ ದಂಪತಿಗಳ ಉದರಲ್ಲಿ ಜನಿಸಿದರು. ಇವರಿಗೆ ದಾಸಿಮಯ್ಯ, ದಾಸಿದೇವ, ದೇವರದಾಸಿಮಯ್ಯ ದೇವದಾಸ ಮುಂತಾದ ಹೆಸರಿನಿಂದ ಪ್ರಸಿದ್ದರಾಗಿದ್ದರು. ಇವರು ಯೌವ್ವನಕ್ಕೆ ಬಂದಾಗ ದುಗ್ಗಳೆಯನ್ನು ಮದುವೆಯಾದರು. ದುಗ್ಗಳೆಯು ಗೊಬ್ಬೂರು ಗ್ರಾಮದ ಮಲ್ಲಿನಾಥ– ಮಹಾದೇವಿಯವರ ಮಗಳಾಗಿ ಜನಿಸಿದ ಇವಳು ದಾಸಿಮಯ್ಯನ ಪರೀಕ್ಷೆಯಲ್ಲಿ ಯಶಸ್ವಿಯಾಗುವಳು 'ನೀರಿಲ್ಲದೆ ಅನ್ನಮಾಡಿ ನೀಡಬೇಕೆಂದು ದಾಸಿಮಯ್ಯನ ಪರೀಕ್ಷೆಯಾಗಿತ್ತು'. ಪಾದೋದಕದಿಂದ ಅನ್ನ ಮಾಡಿ ನೀಡಿದಳು ದುಗ್ಗಳೆ. ಇವಳ ಪರಿಶುದ್ಧವಾದ ಮನಸ್ಸಿಗೆ ಒಲಿದು ಅಗ್ಗಳೆಯಾದ ದುಗ್ಗಳೆಯನ್ನು ಕೈಹಿಡಿದು ದಾಂಪತ್ಯ ಜೀವನಕ್ಕೆ ಅಣಿಯಾದರು. ನೇಯ್ಗೆ ಕಾಯಕದಲ್ಲಿ ದಂಪತಿಗಳು ನಿರತರಾಗಿದ್ದರು. ನೂಲಿನಿಂದ ತಯಾರಿಸಿದ ವಸ್ತುಗಳನ್ನು ಮಾರಿ ಬದುಕು ನಡೆಸುತ್ತಿದ್ದರು. ದಾಸಿಮಯ್ಯನವರ ಒಂದು ವಚನದಲ್ಲಿ ನೋಡಿದಾಗ,

**ಉಂಕಿಯ ನಿಗುಚಿ, ಸರಿಗೆಯ ಸಮಗೊಳಿಸಿ**
**ಸಮಗಾಲನಿಕ್ಕಿ ಅಣಿಯೋಳು, ಏಳ ಮೆಟ್ಟಿದೆ!**
**ಹಿಡಿದ ಲಾಳಿಯ ಮುಳ್ಳು ಕಂಡಿಕೆಯ ನುಂಗಿತ್ತು,**
**ಈ ಸೀರೆ ನೆಯ್ದವ ನಾನೋ ನೀನೋ ರಾಮನಾಥ?**

ಎಂದು ಕಾಯಕದಲ್ಲಿ ನಿರತರಾಗಿ ಸೀರೆಯನ್ನು ನೆಯ್ದು ಸಿದ್ದಾಪೂರ ಸಂತೆಗೆ ಮಾರಲು ಬಂದಾಗ ಅದನ್ನು ಯಾರೂ ಖರೀದಿ ಮಾಡಲಿಲ್ಲ. ಆಗ ಮರಳಿ ಮನೆಗೆ ತೆಗೆದುಕೊಂಡು ಹೋಗುವಾಗ ಮುಪ್ಪಿನ ಜಂಗಮನೊಬ್ಬ

ಕನ್ನಡ ಸಹಾಯಕ ಪ್ರಾಧ್ಯಾಪಕರು, ಎಂ.ಜಿ.ವ್ಹಿಸಿ ಪದವಿ ಮಹಾವಿದ್ಯಾಲಯ, ಮುದ್ದೇಬಿಹಾಳ. ವಿಜಯಪುರ ಜಲ್ಲೆ, ೯೮೬೭೬೭೮೫೨.

ಬಂದು ಚಳಿಯಲ್ಲಿ ನಡುಗುತ್ತ ಹೊದೆಯಲೇನಾದರೂ ಕೊಡಬಲ್ಲೆಯಾ ತಂದೆ? ಬೇರೆ ವಸ್ತ್ರವಿಲ್ಲದ್ದರಿಂದ ದಿವ್ಯಾಂಬರವನ್ನೇ ಕೊಟ್ಟುಬಿಟ್ಟ. ನಂತರ ಜಂಗಮ ಪರಪರನೆ ಹರಿದು ಚಿಂದಿ ಮಾಡಿ, ಕಾಲಿಗೊಂದು ಚಿಂದಿ ಸುತ್ತಿದ, ತಲೆಗೊಂದು ತುಂಡು ಸುತ್ತಿಕೊಂಡ, ಮೈಗೊಂದು ಭಾಗ ಹೊದ್ದುಕೊಂಡ ಇದನೆಲ್ಲವನ್ನು ಸಂಯಮ ಕಳೆದುಕೊಳ್ಳದೇ ದಾಸಿಮಯ್ಯನವರು ನೋಡುತ್ತಿದ್ದರು. ಆನಂದದ ಮುಖದೊಂದಿಗೆ ಮನೆಗೆ ಬಂದು ನಗುನಗುತ್ತಲೇ ದುಗ್ಗಳೆಗೆ ಹೇಳಿದರು. ಬೆಳಗಾದ ಮೇಲೆ ಈ ದಂಪತಿಗಳು ಶಿವನಾಮವನ್ನು ಸ್ಮರಿಸುತ್ತಾ ಎದ್ದರು. ಹಳೆ ಮನೆ ಹೊನ್ನಿನ ಮನೆಯಾಗಿತ್ತು.

**ಬಸವಣ್ಣ–ಗಂಗಾಂಬಿಕೆ, ನೀಲಾಂಬಿಕೆ**

ವಚನ ಸಾಹಿತ್ಯದಲ್ಲಿ ಮಹತ್ವದ ಹೆಸರನ್ನು ಪಡೆದು ಜಗತ್ತಿಗೆ ಅಣ್ಣನಾಗಿ ಹೊರಹೊಮ್ಮಿದ ಬಸವಣ್ಣನವರು ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿಯ ಇಂಗಳೇಶ್ವರದ ಮಾದರಸ ಹಾಗೂ ಮಾದಲಾಂಬಿಕೆಯರ ಪುತ್ರನಾಗಿ ಜನಿಸಿದರು. ಬಿಜ್ಜಳನ ಮಂತ್ರಿಗಳಾಗಿದ್ದ ಬಲದೇವ ಹಾಗೂ ಸಿದ್ಧರಸರು ಮೂಲತಃ ಇಂಗಳೇಶ್ವರದವರೇ ಆಗಿದ್ದು, ಮಾದಲಾಂಬಿಕೆಯ ಸೋದರರಾಗಿದ್ದರು. ಹೀಗಾಗಿ ಅವರು ಬಸವಣ್ಣನವರ ಸೋದರ ಮಾವಂದಿರಾದಂತಾಯಿತು. ಬಲದೇವ ಮಂತ್ರಿಯೊಂದಿಗೆ ಉತ್ಸವಕ್ಕೆ ಆಗಮಿಸಿದ್ದ ಇವರ ಮಗಳು ಗಂಗಾಂಬಿಕೆ, ಸಿದ್ದರಸರ ಮಗಳು ನೀಲಾಂಬಿಕೆಯರು ಬಸವಣ್ಣನವರ ತತ್ವ ಆದರ್ಶಗಳಿಗೆ ಮಾರುಹೋಗಿ ಸಹಧರ್ಮಿನಿಯರಾಗಿ ಬಸವಣ್ಣನವರ ವ್ಯಕ್ತಿತ್ವ ಇಮ್ಮಡಿ ಮಾಡಿದರು.

ಬಸವಣ್ಣನವರು ಸಮಾಜದಲ್ಲಿರುವ ಅನಿಷ್ಟ ಪದ್ಧತಿಗಳನ್ನು ಹೋಗಲಾಡಿಸಿದವರು. ಧಾರ್ಮಿಕ, ಸಾಮಾಜಿಕ, ರಾಜಕೀಯ ಮುಂತಾದ ಕ್ಷೇತ್ರಗಳಲ್ಲಾಗುವ ಮೂಢನಂಬಿಕೆ, ಪ್ರಾಣಿಬಲಿ, ನರಬಲಿ, ಕನ್ಯಾಬಲಿ, ಯಜ್ಞ–ಯಾಗ, ಹೋಮ–ಹವನಗಳನ್ನು, ವರ್ಣಾಶ್ರಮ ಪದ್ಧತಿಯನ್ನು ಅಳಿಸಿ ಹಾಕಲು ಬಸವಣ್ಣನವರು ತಮ್ಮ ಹಲವಾರು ವಚನಗಳಲ್ಲಿ ತಿಳಿಸಿದ್ದಾರೆ. ಗಂಗಾಂಬಿಕೆ, ನೀಲಾಂಬಿಕೆಯರು ಬಸವಣ್ಣನ ವಿಚಾರಧಾರೆಗೆ ಬೆನ್ನಲುಬಾಗಿ ನಿಂತು ಅವರ ಯಶಸ್ವಿಗೆ ಶ್ರಮಿಸಿ ಆದರ್ಶ ದಂಪತಿಗಳಾಗಿ ಬದುಕಿದವರು.

ಬಸವಣ್ಣನವರ ಮಹಾಮನೆಗೆ ಒಂದು ದಿನ ಕಳ್ಳ ಕಳ್ಳತನಕ್ಕೆ ಬಂದು ಮಹಾಮನೆಯ ತುಂಬಾ ಹುಡುಕಿದರೂ ಬೆಳ್ಳಿ, ಬಂಗಾರ, ನಗ–ನಾಣ್ಯ ಕಾಣಿಸಲೆ ಇಲ್ಲ. ನೀಲಾಂಬಿಕೆಯು ಮಲಗಿದ್ದ ಕೋಣೆಗೆ ಕಳ್ಳ ಬಂದಾಗ ದೀಪದ ಮಂದ ಬೆಳಕಿನಲ್ಲಿ ಅವರ ಕೊರಳಲ್ಲಿದ್ದ ಚಿನ್ನದಾಭರಣಗಳು ಕಿವಿಯ ಬೆಂಡೋಲೆ ನೋಡಿ ಅವುಗಳನ್ನು ಬಿಚ್ಚಿಕೊಳ್ಳುವಾಗ, ನೀಲಾಂಬಿಕಾ ತಾಯಿಗೆ ಎಚ್ಚರವಾಗಿ ಕಳ್ಳ–ಕಳ್ಳ ಎಂದು ಕೂಗಿದಾಗ ಕಾವಲುಗಾರರು ಕಳ್ಳನನ್ನು ಹಿಡಿದು ಬಸವಣ್ಣನವರ ಮುಂದೆ ತರುತ್ತಾರೆ. ಕಳ್ಳನ ಶರಣರ ವೇಷ ನೋಡಿ' ಕಳ್ಳನು ಮಹಾಮನೆಗೆ ಕಳ್ಳತನಕ್ಕೆ ಬರಬೇಕಾದರೆ ಆತನಿಗೆ ಬೇಕಾದ ವಸ್ತುಗಳನ್ನು ಸಂಗ್ರಹಿಸಿಟ್ಟುಕೊಂಡಿರುವದು ತಾವು ಕಳ್ಳರಲ್ಲವೇ'? ಎಂದು ನೀಲಾಂಬಿಕೆಗೆ ಹೇಳುವ ಮಾತಿನ ವಚನ,

**'ಒಡನಿರ್ದ ಸತಿಯೆಂದು ನಚ್ಚಿರ್ದೆನಯ್ಯಾ**
**ಕೈವಿಡಿದ ಸಜ್ಜನೆಯೆಂದು ನಂಬಿರ್ದೆನಯ್ಯಾ**
**ಅಯ್ಯೊ ನಮ್ಮಯ್ಯನ ಕೈನೊಂದಿತ್ತು**
**ತೆಗೆದುಕೊಡು ಎಲೆ ನೀಲಾ ಬೆಂಡೋಲೆ ಕಿತ್ತಿ**
**ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದಡೆ**
**ಕೂಡಲಸಂಗಮದೇವನಲ್ಲದೆ ಮತ್ತಾರೂ ಅಲ್ಲಾ**

ನೀಲಾಂಬಿಕೆಯು ಬೆಂಡೋಲೆ ಬಿಚ್ಚಿ ಕಳ್ಳ ಭದ್ರನ ಕೈಗೆ ಕೊಡಲು ಹೋದಾಗ ಆತನು ಪಶ್ಚಾತ್ತಾಪದ ಕಣ್ಣೀರು ಸುರಿಸುತ್ತಾ ನಾನು ದೇವರಲ್ಲ. ನಾನೊಬ್ಬ ಕಳ್ಳ ಎಂದು ಬಿಕ್ಕಿ–ಬಿಕ್ಕಿ ಅಳತೊಡಗಿದ. ನೀನು ಕಳ್ಳನಲ್ಲ, ನೀನು ನನ್ನ ಕಣ್ಣು ತೆರೆಸಿದ ದೇವರು. ನೀನು ನನ್ನಯ್ಯ ಎಂದು ಹೃದಯ ತುಂಬಿ ಬಸವಣ್ಣ ನುಡಿದರು. ಇಂತಹ ಘಟನೆಯಲ್ಲಿ ನೀಲಾಂಬಿಕೆಯು ಬಸವಣ್ಣನವರು ನುಡಿದ ವಾಕ್ಯಗಳು ಸತ್ಯವೆನಿಸಿ ಆದರ್ಶ ನಾರಿಯಾಗಿ ಬಾಳಿದಳು.

**ಆಯ್ದಕ್ಕಿ ಮಾರಯ್ಯ–ಲಕ್ಕಮ್ಮ**

ಶಿವಶರಣರು ರೂಪಿಸಿದ ಕಾಯಕ ತತ್ವವನ್ನು ಒಪ್ಪಿಕೊಂಡು ಅದರಂತೆ ಬದುಕಿದ ಶಿವಶರಣರು. ಈ ಶರಣ ದಂಪತಿಗಳು ಶರಣರ ಮನೆಯಂಗಳದ ಅಕ್ಕಿ ಆಯ್ದು ತಂದು ದಾಸೋಹ ಮಾಡುವ ಕಾರ್ಯದಲ್ಲಿ ನಿರತರಾಗಿದ್ದರು.

ಒಮ್ಮೆ ಆಯ್ದಕ್ಕಿ ಮಾರಯ್ಯ ಅಲ್ಲಮ ಪ್ರಭುವಿನೊಂದಿಗೆ ಮಾತಿಗೆ ತೊಡಗಿಕೊಂಡಾಗ ಲಕ್ಕಮ್ಮ ಇನ್ನೂ ಎಷ್ಟು ಹೊತ್ತು ಹಾಗೆಯೇ ಮನಮಗ್ನ ಯೋಗದಲ್ಲಿ ಕುಳಿತಿರುತ್ತಿದ್ದನೋ ಎಂದು, 'ಕಾಯಕ ನಿಂದಿತ್ತು ಏಳಯ್ಯಾ ಎನ್ನಾಳ್ದನೆ! ಭಾವಶುದ್ಧಿಯಾಗಿ ಮಹಾ ಶರಣರ ತಿಪ್ಪೆಯ ತಪ್ಪಲ ಆಕ್ಕಿಯ ತಂದು ನಿಶ್ಚೈಸಿ ಮಾಡಬೇಕು ಮಾರಯ್ಯಾ ಪ್ರಿಯ ಅಮರೇಶ್ವರ ಲಿಂಗಕ್ಕೆ ಬೇಗ ಹೋಗಿ ಮಾರಯ್ಯ!' ಎಂದು ಪತಿ ಮಾರಯ್ಯನಿಗೆ ತಿಳಿಸುತ್ತಾಳೆ. ಬಸವಣ್ಣನವರ ಮಹಾಮನೆಯಲ್ಲಿ ಬಿದ್ದ ಅಕ್ಕಿಯನ್ನು ದಿನಕ್ಕಿಂತ ಹೆಚ್ಚಾಗಿ ಶೇಖರಿಸಿಕೊಂಡು ತಂದು ಮಡದಿಯ ಮುಂದಿಡುತ್ತಾನೆ. ಆಗ ಲಕ್ಕಮ್ಮ :

'ಆಸೆಯೆಂಬುದು ಅರಸಿಂಗಲ್ಲದೆ
ಶಿವಭಕ್ತರಿಗುಂಟೆ ಅಯ್ಯಾ?
ರೋಷವೆಂಬುದು ಯಮದೂತರಿಗಲ್ಲದೆ
ಅಜಾತರಿಗೆ ಉಂಟೆ ಅಯ್ಯಾ?
ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ
ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ ದೂರ ಮಾರಯ್ಯ'

ಇವಳ ಮಾತು ಎಷ್ಟೊಂದು ನಿಸ್ಪೃಹತೆಯಿಂದ ಕೂಡಿದೆ. ಈ ಭಾವನೆ ನಮ್ಮ ಎಲ್ಲ ಹೆಣ್ಣು ಮಕ್ಕಳಲ್ಲಿ ಬಂದದ್ದೆ ಆದರೆ ಭ್ರಷ್ಟಾಚಾರ ತಪ್ಪುವುದು. ಬಡತನ, ಸಿರಿತನ, ಕಾಯಕ-ದಾಸೋಹ ಮುಂತಾದವುಗಳ ಬಗ್ಗೆ ಈ ದಂಪತಿಗಳು ಅನುಭವಿಸಿ ಬದುಕನ್ನು ಕಳೆದವರು.

## ಹಡಪದ ಅಪ್ಪಣ್ಣ-ಲಿಂಗಮ್ಮ

ಹಡಪದ ಅಪ್ಪಣ್ಣ ಹಾಗೂ ಲಿಂಗಮ್ಮ ಶರಣ ದಂಪತಿಗಳು ಕಾಯಕ ಜೀವಿಗಳಾಗಿದ್ದರು ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರ ಬಲಗೈ ಬಂಟನಾಗಿ ಕಲ್ಯಾಣದ ಪ್ರಧಾನ ಕಾರ್ಯದರ್ಶಿಯಾಗಿ. ಸೇವೆ ಸಲ್ಲಿಸಿದವರು ಹಡಪದ ಕಾಯಕವನ್ನು ಮಾಡುತ್ತಾ ಗುರು, ಲಿಂಗ ಜಂಗಮದ ಬಗ್ಗೆ ಅಪಾರ ಕಾಳಜಿ ಹೊಂದಿದ ಶರಣ 'ಅಂದು ಹಡಪದ ಸಮಾಜದವರು ಬೆಳಿಗ್ಗೆ ಎದುರುಗಡೆ ಬಂದರೆ ಏನೋ ಆಗುತ್ತದೆ.' ಎಂಬ ಮೂಢನಂಬಿಕೆಯನ್ನು ಹೋಗಲಾಡಿಸಲು ಪ್ರಯತ್ನಿಸಿದ ಶರಣ ಇವರ ಧರ್ಮಪತ್ನಿ ಲಿಂಗಮ್ಮವರು ಸಹ ವಚನಗಳನ್ನು ಬರೆದು ಪತಿಯ ಮಾರ್ಗದರ್ಶನದಲ್ಲಿ ಬದುಕಿದವಳು. ಹಡಪದ ಅಪ್ಪಣ್ಣ ಬಸವಣ್ಣನವರ ಧರ್ಮಪತ್ನಿ ನೀಲಾಂಬಿಕೆಯು ಮಾತೃ ವಾತ್ಸಲ್ಯವನ್ನು ಹೊಂದಿದ್ದರು. ಇಂದಿಗೂ ತಂಗಡಗಿಯಲ್ಲಿ ಪೂರ್ವಕ್ಕೆ ನೀಲಾಂಬಿಕೆಯ ದೇವಾಲಯ ಶೋಭಿಸಿದರೆ ಪಶ್ಚಿಮಕ್ಕೆ ಹಡಪದ ಅಪ್ಪಣ್ಣನವರ ದೇಗುಲ ಕಾಣುತ್ತದೆ.

## ರಾಯಸದ ಮಂಚಣ್ಣ-ರಾಯಮ್ಮರು

ಕಲ್ಯಾಣದಲ್ಲಿ ಹಲವಾರು ವಿಷಯಗಳನ್ನು ಚರ್ಚಿಸಿ ತಿಳಿಸುವ ಹಿರಿಯ ಕಜ್ಜ ಆತನದಾಗಿತ್ತು. ಇವನು ಬಸವಣ್ಣನವರ ನಂಬಿಗಸ್ಥನಾಗಿದ್ದನು. ಶರಣರ ಮಾರ್ಗದರ್ಶನದಲ್ಲಿ ನಂಬಿ ನಡೆದ ಇವರ ಮಡದಿ ರಾಯಮ್ಮನು ಹಲವಾರು ವಚನಗಳನ್ನು ಬರೆದವಳು. ಇವರು ತಮ್ಮ ವಚನಗಳ ಅಂಕಿತಗಳನ್ನು ಬೇರೆ-ಬೇರೆಯಾಗಿಟ್ಟುಕೊಂಡು ಸ್ವಾತಂತ್ರ್ಯದೊಂದಿಗೆ ಬಾಳಿ ಬದುಕಿದವರು. ಮಂಚಣ್ಣನ ಅಂಕಿತ "ಜಾಂಬೇಶ್ವರಾ" ಎಂದಿದ್ದರೆ ರಾಯಮ್ಮನ ಅಂಕಿತ ಅಮುಗೇಶ್ವರಾ. ಸತಿ-ಪತಿಗಳಾದರೂ ಸಾಧನ ಪಥದಲ್ಲಿ ಸ್ವತಂತ್ರರಾಗಿ ಬೆಳೆದವರು. ರಾಯಮ್ಮ ಅನುಭವದ ತಾಯಮ್ಮಳಾಗಿ 'ವಿಶ್ವಮಯ ರೂಪಾಗಿ ಬಂದೆಯಯ್ಯ! ಎಂದು ಆಕೆ ಗುರುವಿನ ಬರವನ್ನು ಬಣ್ಣಿಸುವಾಗ ಆಕೆಗೆ ಈಶ್ವರನ ವಿಶ್ವರೂಪ ದರ್ಶನವಾಗಿದ್ದಿತೆಂದೂ ಒಪ್ಪಲೇಬೇಕಾಗುತ್ತದೆ.

## ಅಮುಗಿ ದೇವಯ್ಯ-ರಾಯಮ್ಮ

ರಾಯಮ್ಮನ ಜೀವನ ವಿವರಗಳು ಹೆಚ್ಚಾಗಿ ದೊರೆತಿಲ್ಲವಾದರೂ ಅವಳು ನೂರಕ್ಕಿಂತಲೂ ಹೆಚ್ಚು ವಚನಗಳನ್ನು ರಚಿಸಿದವಳು. ಅಮುಗಿ ದೇವಯ್ಯನು ಪವಾಡ ಪುರುಷರಾಗಿದ್ದರು; ಏಕಲಿಂಗ ನಿಷ್ಠೆಯುಳ್ಳವರು. ಅಂಗದ ಮೇಲೆ ಲಿಂಗವಿಲ್ಲದ ಭವಿಯ ಸೇವಿಸೆವು ಎಂದು ಹೇಳಿ ಭತ್ತವನ್ನು ತಿಪ್ಪೆಗೆ ಹಾಕಿಸಿ ಸಿದ್ದರಾಮನ ಆದೇಶದಂತೆ ಊರು ಬಿಟ್ಟವರು. ಮೂರು ಹೊರೆಗಳನ್ನು ಮಾಡಿ ಪತಿ-ಪತ್ನಿಯರು ಒಂದೊಂದು ಹೊರೆಗಳ ಹೊತ್ತು ಉಳಿದೊಂದು ಪಾತ್ರೆಗಳ ಹೊರೆಯನ್ನು ಕಪಿಲಸಿದ್ಧ ಮಲ್ಲಯ್ಯನಿಗೆ ತರುವಂತೆ ಹೇಳಿ ಹೊರಡುತ್ತಾನೆ. ಆ ಪ್ರಕಾರ ಕಪಿಲಸಿದ್ಧ ಮಲ್ಲಯ್ಯ ಒಂದು ಹೊರೆಯನ್ನು ಹೊತ್ತು ಒಯ್ಯುತ್ತಾನೆ. ಕಾಯಕದಲ್ಲಿ ನಿಷ್ಠೆ ಭಕ್ತಿಯನ್ನಿಟ್ಟುಕೊಂಡ ದಂಪತಿಗಳು ಇವರು. ರಾಯಮ್ಮನಿಗೆ ವರದಾನಿಯಮ್ಮ ದಾನಮ್ಮ ಎಂಬ ಇನ್ನೊಂದು ಹೆಸರು ಇತ್ತೆಂದು ತಿಳಿದುಬಂದಿದೆ. ಅಂತರಂಗ ಬಹಿರಂಗದಲ್ಲಿ ಸತಿ-ಪತಿಗಳು ಒಂದಾಗಿ ಬಾಳಿ ಬದುಕಿದವರು.

## ಉರಿಲಿಂಗಪೆದ್ದಿ-ಸತಿ ಕಾಳವ್ವೆ

ಉರಿಲಿಂಗ ಪೆದ್ದಿಯು ಕಳ್ಳತನವನ್ನು ಮಾಡಿ ಜನರಿಗೆ ಮೋಸ ವಂಚನೆ ಮಾಡಿ ಬದುಕುತ್ತಿದ್ದನು. ಇವನ ಸತಿ ಕಾಳವ್ವೆ ಶರಣರ ಮಾರ್ಗವನ್ನು ಅನುಸರಿಸಿದವಳು. ಇವರು ಉರಿಲಿಂಗದೇವರಿಂದ ಪ್ರಭಾವಿತನಾಗಿ ಲಿಂಗಾಯತ ಧರ್ಮ ತತ್ವಗಳಿಗೆ ಮನಸೋತು ತನ್ನ ಹೀನ ಕಾರ್ಯ ತ್ಯಜಿಸಿ ಪ್ರಾಮಾಣಿಕ ಶರಣರಾಗಿ ಬಾಳಿದರು. ಜಾತಿ ವಿರೂಧವನ್ನು ಮಾಡಿದವರು ಹೀನ ಆಚರಣೆಗಳ ವಿರೋಧಿಸಿದವರು. ಕೊಟ್ಟವರೊಳು ಸಮ್ಮೋಹ ಕೊಡದವರೊಳು ಕ್ರೋಧ ತೋರುವ ಸ್ವಾರ್ಥಿಗಳು ಸೊಳೆಗೆ ಹುಟ್ಟಿದ ಮಕ್ಕಳು ಎಂದು ನಿಂದಿಸಿದವರು ಕಳ್ಳನ ಪತ್ನಿಯಾಗಿ ಜೀವನಾರಂಭ ಮಾಡಿದ ಕಾಳವ್ವೆ ಪರಿಸರ ಪ್ರಭಾವದಿಂದ ವಿದ್ಯಾವಂತಳಾಗಿ ಸಂಸ್ಕಾರ ಬಲದಿಂದ ಅಧ್ಯಾತ್ಮ ತತ್ವವನ್ನರಿತು ಅದನ್ನು ಬೋಧಿಸಿ ತಮ್ಮ ಬದುಕನ್ನು ಸಾರ್ಥಕಪಡಿಸಿಕೊಂಡ ದಂಪತಿಗಳು.

## ರೇವಣಸಿದ್ದಯ್ಯ-ಸತಿ ರೇಕಮ್ಮ

ರೇವಣಸಿದ್ದಯ್ಯ ಹಾಗೂ ರೇಕಮ್ಮ ಆದರ್ಶ ದಂಪತಿಗಳು. ಶರಣೆ ರೇಕಮ್ಮ ನಿತ್ಯವೂ ಹಲವು ಬಗೆಯ

ಪುಷ್ಪ ಇಪ್ಪತ್ತೆಂಟು ಬಗೆ ಬಗೆಯ ಪತ್ರೆ, ಒಂಬತ್ತು ಬಗೆಯ ಪರಿಮಳ ಬೇರು, ಇತ್ಯಾದಿಗಳನ್ನು ಒದಗಿಸಿಕೊಂಡು ಮಧ್ಯಕ್ಕೆ ಕರವೀರ ಕೆಂಪಿನ ಸೇವಂತಿಗೆಯನ್ನು ಸೇರಿಸಿ ದಂಡೆಗಳ ಕಟ್ಟಿ ಲಿಂಗಕ್ಕೆ ಅಷ್ಟವಿಧ ಪೂಜೆಸಲ್ಲಿಸುವ ನೇಮವ ಕೈಗೊಂಡವಳು. ಈ ದಂಪತಿಗಳು ಆಚಾರ ಭ್ರಷ್ಟರನ್ನು ವ್ರತ ತಪ್ಪಿತಸ್ಥರನ್ನು ಕೊಂದರು ತಪ್ಪಿಲ್ಲವೆಂದು ಹೇಳಿದ ಶರಣ ದಂಪತಿಗಳು.

## ಹರಳಯ್ಯಾ-ಸತಿ ಕಲ್ಯಾಣಮ್ಮ

ಕಲಬುರ್ಗಿ ಜಿಲ್ಲೆಯ ಸುರುಪುರ ಪ್ರಾಂತದಿಂದ ಕಲ್ಯಾಣಕ್ಕೆ ಆಗಮಿಸಿದ ಶರಣ ದಂಪತಿಗಳು ಬಸವ ಗುರುವಿನಿಂದ ದೀಕ್ಷಾ ಸಂಸ್ಕಾರ ಪಡೆದು ಇಷ್ಟಲಿಂಗಧಾರಿಗಳಾಗಿ ಚಮ್ಮಾವುಗೆ ಕಾಯಕ ಕೈಗೊಂಡಿದ್ದರು. ಬಸವಣ್ಣ ಅರಮನೆಯ ಕಾಯಕ ಪೂರೈಸಿ ತಮ್ಮ ಮಹಾಮನೆಗೆ ಪ್ರಸಾದಕ್ಕೆಂದು ಹೊರಟಾಗ ರಾಜಬೀದಿಯಲ್ಲಿ ಪ್ರಜೆಗಳು ಭಕ್ತಿ ಭಾವದಿಂದ ಶರಣು ಸಲ್ಲಿಸುತ್ತಿದ್ದರು. ಹರಳಯ್ಯ ಶರಣರು ಭಕ್ತಿಯಿಂದ 'ಶರಣು ಬಸವ ಗುರುವೆ' ಎಂದು ಕೈಜೋಡಿಸಿದರು. ಹಣೆಯ ಮೇಲೆ ಶುಭ್ರ ವಿಭೂತಿ ಕಂಡು ಬಸವಣ್ಣನವರು ಆತ್ಮೀಯತೆಯಿಂದ' ಶರಣು, ಶರಣಾರ್ಥಿ ಶರಣ ಹರಳಯ್ಯನವರೇ' ಎಂದು ಕೈಜೋಡಿಸಿ ವಂದಿಸಿದರು. ಇದನ್ನು ನೋಡಿದ ಮಾದರ ಹರಳಯ್ಯನವರು ಏನೂ ತೋಚದೆ ಕ್ಷಣ ನಿಂತುಕೊಂಡರು. ಬಸವಣ್ಣನವರ ಭಾರ ಇಳಿಸಲು ಚಿಂತೆಯಿಂದ ಕುಳಿತಾಗ ಸತಿ ಕಲ್ಯಾಣಮ್ಮ ಚಿಂತೆಗೆ ಕಾರಣವೇನು? ಎಂದು ತಿಳಿದು ಅವಳು

'ಮಡದಿ ಕಲ್ಯಾಣಮ್ಮ ತೊಡಕು ಬಿಡಿಸಿದಳಾಕೆ
ಗಡನೊಂದು ಜೋಡು ಕೆರ ಮಾಡಿ -ಬಸವರಿಗೆ
ಒಡೆಯ ಮೆಚ್ಚೆಂದು ಅರ್ಪಿಸಿರಿ ॥

ಶರಣ ದಂಪತಿಗಳು ತಮ್ಮದೊಂದು ತೊಡೆಯ ಚರ್ಮವನ್ನು ಬಸವ ಮಂತ್ರದೊಂದಿಗೆ ವಿಭೂತಿ ಸ್ಪರ್ಶಿಸಿ ಪಾದೋದಕ ಸಿದ್ಧಪಡಿಸಿಕೊಂಡು, ತೊಡೆಗಳಿಗೆ ಲೇಪಿಸಿ, ಬಸವಾ-ಬಸವಾ ಎಂದು ಮಂತ್ರ ಧ್ಯಾನ ಮಾಡುತ್ತಾ ರೆಂಪಿಗೆಯಿಂದ ಚರ್ಮ ಸುಲಿದು, ಹದಮಾಡಿ ತಮ್ಮ ಚರ್ಮವನ್ನು ಅಂಟಿಸಿ ಹೊಲಿದು, ಸುಂದರವಾದ ಒಂದು ಜೊತೆ ಚಮ್ಮಾವುಗೆಗಳನ್ನು ಸಿದ್ಧಪಡಿಸಿದರು. ನಂತರ ಭಕ್ತಿ-ಭಾವದಿಂದ ಬಸವಣ್ಣನವರಿಗೆ ಇವುಗಳನ್ನು ಧರಿಸಿ ನಮ್ಮನ್ನು ಋಣಮುಕ್ತರನ್ನಾಗಿಸಿ ಗುರುವೇ ಎಂದು ವಿನಂತಿಸಿಕೊಂಡರು. ಬಸವಣ್ಣನವರು ಚಮ್ಮಾವುಗೆಗಳನ್ನು ಕೈಯಲ್ಲಿ ಹಿಡಿದುಕೊಂಡು, ಶರಣ ದಂಪತಿಗಳ ನಿರ್ಮಲ ಮುಗ್ಧಭಕ್ತಿ ಕಂಡು

'ನಿಮ್ಮ ಶರಣರ ಚಮ್ಮಾವುಗೆಗೆ
ಪೃಥ್ವಿ ಸಮಬಾರದು, ಸರಿಯಲ್ಲ ನೋಡಾ
ಕೂಡಲಸಂಗಮದೇವಾ
ನಿಮ್ಮ ಶರಣರ ಚಮ್ಮಾವುಗೆಗೆ!

ಶರಣ ದಂಪತಿಗಳು ಮಾಡಿದ ಚಮ್ಮಾವುಗೆಗಳನ್ನು ಭಕ್ತಿಯಿಂದ ತಲೆಯ ಮೇಲೆ ಇಟ್ಟುಕೊಂಡು ಕುಣಿದಾಡಿದರು. ಕಲ್ಯಾಣದ ಶಿವ ಶರಣರು ಹರಳಯ್ಯ ಹಾಗೂ ಕಲ್ಯಾಣಮ್ಮರ ಭಕ್ತಿಯನ್ನು ಕೊಂಡಾಡಿದರು.

ಶರಣ ಪರಂಪರೆಯಲ್ಲಿ ಸ್ತ್ರೀ-ಪುರುಷ ಸಮಾನತೆಯೊಂದಿಗೆ ವ್ಯಕ್ತಿ ಸ್ವತಂತ್ರ, ಕೌಟುಂಬಿಕ ಜವಾಬ್ದಾರಿ, ಸಾಮಾಜಿಕ ಕಾಳಜಿಯನ್ನು ಕಾಣಬಂದುದಾಗಿದೆ. ಶರಣ ಧರ್ಮವು ಸತಿ-ಪತಿ ಧರ್ಮವೇ ಆಗಿದೆ. ಮಾನಸಿಕವಾಗಿ ಆತ್ಮ ಸಾಂಗತ್ಯವಾದ ಭಕ್ತಿ ಮಂಗಳಮಯವಾದ ಶಿವನಿಗೆ ಹಿತ ಎನಿಸುವುದು 'ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷ ಬೆರೆದಂತೆ 'ಸತಿ ಪತಿ ಒಂದಾಗುವಲ್ಲಿ ಪತಿಯ ಪಾತ್ರವೇ ಮುಖ್ಯವಾದುದು ಶರಣ ಸತಿ ಲಿಂಗ ಪತಿ ಎಂಬ ತತ್ವದಡಿಯಲ್ಲಿ ಬಾಳಿ ಬದುಕಿದ ಶರಣರ ಬದುಕು ಮಾದರಿ. ಇನ್ನೂ ಹಲವಾರು ಶರಣ ದಂಪತಿಗಳ ಚರಿತ್ರೆ ಇದ್ದು. ಈ ಲೇಖನದಿಂದ ಉಳಿದಿವೆ. ಅಂಥವರ ಕುರಿತು ಸಂಶೋಧನೆ ಆಗುವುದು ಅಗತ್ಯವಿದೆ.

## ಆಕರ ಗ್ರಂಥಗಳು

ಶರಣ ಚರಿತಾಮೃತ : ಡಾ. ಸಿದ್ದಯ್ಯ ಪುರಾಣಿಕ
ಶಾಸನಗಳಲ್ಲಿ ಶಿವಶರಣರು : ಡಾ. ಎಂ. ಎಂ. ಕಲಬುರ್ಗಿ
ವಚನಕಾರ್ತಿಯರು ; ಪ್ರೊ. ಎಚ್. ಎಂ. ಬೀಳಗಿ
ವಿಶ್ವಗುರು ಬಸವಣ್ಣನವರು : ಪ್ರೊ. ಸಿದ್ದಣ್ಣ ಲಂಗೋಟಿ
ಸಂಗಮ ಸೆಲೆ: ಡಾ. ಪ್ರಕಾಶ ಎನ್. ನರಗುಂದ

■■

**LINGAYAT DARSHAN MONTHLY**

`Registered' RNI No. KARKAN/2013/52301 Date : 30.09.2013
Postal No. PMG-KA/NK/BM/105/20-22 Date : 26.11.2019
Posted at Belagavi Nehru nagar on 1st week of every month

Vol-8, Issue-08, August 2021, Page : 32+4,




**Containing Printed Book**

To,

Owner : Secretary siddharameshwar Shikshan Samsthe, Vachan Adhyayan Kendra Shivabasavanagar, Belgaum-590010 (Karnataka)
Printer & Publisher: S.S. Kallolimath Secretary, siddharameshwar Shikshan Samsthe, Vachan Adhyayan Kendra Shivabasavanagar, Belgavi-590010 (Karnataka)
Printed at : Shiva Offset Printers, Belgavi. Cell : 9448304550, Ph : 0831- 4204005
Editer: N.G. Mahadevappa Vachan Adhyayan Kendra Shivabasavanagar, Belgavi-590010
Cell : 9886757522 e-mail: lingayatmonthly@gmail.com